**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 51/2017</u>**

ದಿನಾಂಕಃ 27.08.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 4 ಪ್ರಾಸಾ - 4

| | | |
|---|---|---|
| ಹೆಸರು | ಃ | ನಂಜುಂಡಸ್ವಾಮಿ |
| ತಂದೆಯ/ಗಂಡನ ಹೆಸರು | ಃ | ಶಿವರುದ್ರಯ್ಯ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ಕಟುಕನಪಾಳ್ಯ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಈ ದಿವಸ ಸಾಕ್ಷಿ ನುಡಿದ ಪಿರ್ಯಾದಿ ಪ್ರೇಮ ನನಗೆ ಗೊತ್ತು. ಆಕೆಯ ಮನೆ ಕೆಂಪವಡೇರಹಳ್ಳಿ ಮತ್ತು ಮಾದೇಗೌಡನದೊಡ್ಡಿ ಮುಖ್ಯರಸ್ತೆಯ ಬದಿಯಲ್ಲಿ ಇದೆ. ಸದರಿ ಪ್ರೇಮಾ ವ್ಯವಸಾಯ ಮಾಡಿಕೊಂಡು ಸೀಮೆ ಹಸುಗಳನ್ನು ಕೂಡ ಸಾಕುತ್ತಿದ್ದಾರೆ.

2. ಸುಮಾರು 1 ವರ್ಷದ ಹಿಂದೆ ಅವರ ಮನೆಯಲ್ಲಿ ಕಳ್ಳತನವಾದ ಸಂಬಂಧವಾಗಿ ಪೊಲೀಸರು ಬಂದಿದ್ದರು. ಅಲ್ಲಿ ಪೊಲೀಸರು ಮಹಜರ್ ಮಾಡುತ್ತಿದ್ದರು.

3. ಪೊಲೀಸರು ಸ್ಥಳದಲ್ಲಿ ಒಂದು ಮುರಿದು ಹೋಗಿರುವ ಚಾಕು, 2 ಪ್ಲಾಸ್ಟರ್ ಟೇಪುಗಳು, ಒಂದು ರೊಟ್ಟಿ ದಬ್ಬೆ ಮತ್ತು ಒಂದು ಹಸಿರು ಟವಲ್‌ನ್ನು ವಶಪಡಿಸಿಕೊಂಡರು. ಅಲ್ಲಿ ಪೊಲೀಸರು ನನ್ನ ರುಜು ಪಡೆದುಕೊಂಡಿದ್ದಾರೆ. ಆ ದಾಖಲೆಯನ್ನು ಈಗ ನೋಡಿದೆ.

ಅದರಲ್ಲಿ ನನ್ನ ರುಜು ಇದೆ. ಸದರಿ ದಾಖಲೆಯನ್ನು ಈಗಾಗಲೇ ನಿಶಾನೆ ಪಿ 2 ಎಂದು ನಿಶಾನೆ ಮಾಡಲಾಗಿದೆ. ಸಾಕ್ಷಿಯ ರುಜುವನ್ನು ನಿಶಾನೆ ಪಿ 2(ಬಿ) ಎಂದು ನಿಶಾನೆ ಮಾಡಲಾಯಿತು.

4. ಪೊಲೀಸರು ವಶಪಡಿಸಿಕೊಂಡ ಒಂದು ಚಾಕು, 2 ಪ್ಲಾಸ್ಟರ್ ಟೇಪುಗಳು, ಒಂದು ರೊಟ್ಟಿ ದಬ್ಬೆ ಮತ್ತು ಒಂದು ಹಸಿರು ಟವಲ್‌ನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡಿದೆ. ಆ ಮುರಿದಿರುವ ಕಬ್ಬಿಣದ ಚಾಕು ಈಗ ನೋಡಿದ ಮುದ್ದೆಮಾಲು 1, ರೊಟ್ಟಿ ದಬ್ಬೆ ಮುದ್ದೆಮಾಲು 2, 2 ಪ್ಲಾಸ್ಟರ್ ಮುದ್ದೆಮಾಲು 3 ಮತ್ತು ಹಸಿರು ಟವಲ್ ಮುದ್ದೆಮಾಲು 4 ಆಗಿವೆ.

**ಪಾಟೀಸವಾಲುಃ ಶ್ರೀ.ಹೆಚ್.ಎಸ್.ಆರ್. ವಕೀಲರಿಂದಃ 1 ನೇ ಆರೋಪಿ ಪರವಾಗಿಃ**

5. ಕಟುಕನಪಾಳ್ಯದಿಂದ ಕೆಂಪವಡೇರಹಳ್ಳಿಗೆ ಸುಮಾರು 1.5 ಕಿ.ಮೀ. ದೂರ. ಪ್ರೇಮಾ ನನಗೆ ತುಂಬಾ ಪರಿಚಯಸ್ಥಳು ಎನ್ನುವುದು ಸರಿಯಲ್ಲ. ಪ್ರೇಮಾಳ ಮನೆ ರಸ್ತೆಯ ಬದಿಯಲ್ಲಿಯೇ ಇದೆ ಎನ್ನುವುದು ಸರಿ. ಆ ಮನೆಯಿಂದ 10-20 ಅಡಿ ದೂರದಲ್ಲಿ ಬಸ್ ಸ್ಟಾಪ್ ಇದೆ ಎನ್ನುವುದು ಸರಿ. ಅಲ್ಲಿ ಅಂಗನವಾಡಿ ಮತ್ತು ಶಾಲೆ ಇದೆ. ಅಲ್ಲಿ ಯಾವಾಗಲೂ ಜನಸಂದಣಿ ಇದೆ ಎನ್ನುವುದು ಸರಿಯಲ್ಲ.

6. ಮುದ್ದೆಮಾಲು 1 ರಿಂದ 4 ನ್ನು ಆ ದಿವಸ ಪ್ರೇಮಾಳೇ ಪೊಲೀಸರಿಗೆ ತಂದು ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿಯು

ಸ್ವತಃ ಮಹಜರ್ ಮಾಡುವ ಕಾಲದಲ್ಲಿ ಪೊಲೀಸರು ಸ್ಥಳದಿಂದ ತೆಗೆದುಕೊಂಡಿದ್ದಾರೆ ಎಂದು ಉತ್ತರಿಸಿದ್ದಾರೆ. ಆ ವಸ್ತುಗಳನ್ನು ಪ್ರೇಮಾ ಪೊಲೀಸರಿಗೆ ತಲುಪಿಸಿದರು. ಅದನ್ನು ಪೊಲೀಸರು ತೆಗೆದುಕೊಂಡಾಗ ನಾನು ರುಜು ಮಾಡಿದ್ದೇನೆ.

7. ಪೊಲೀಸರು ಘಟನಾ ಸ್ಥಳದಲ್ಲಿ ಮುದ್ದೆಮಾಲು 1 ರಿಂದ 4 ನ್ನು ಸ್ಥಳದಿಂದ ಅಮಾನತು ಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಮುದ್ದೆಮಾಲು 1 ರಿಂದ 4 ನ್ನು ಪ್ರೇಮಾಳೇ ದಿನನಿತ್ಯ ಉಪಯೋಗಿಸುತ್ತಿದ್ದಳು ಎಂದರೆ ಆಕೆ ಉಪಯೋಗಿಸುತ್ತಿದ್ದುದ್ದನ್ನು ನಾನು ನೋಡಿಲ್ಲ. ಪೊಲೀಸರು ಮಹಜರ್ ಮಾಡಿದಾಗ ಸ್ಥಳದಲ್ಲಿ ನಾನು, ಪ್ರೇಮಾ, ಗಿರೀಶ್, ಮಹೇಶ್ವರ ಶಾಸ್ತ್ರಿ ಮುಂತಾದವರು ಇದ್ದರು.

8. ಮಹಜರ್‌ನಲ್ಲಿ ಏನೇನು ಬರೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಓದಿಯೇ ರುಜು ಮಾಡಿದ್ದೇನೆ. ಘಟನೆ ನಡೆದ ಮನೆಯ ಪೂರ್ವಕ್ಕೆ ಮಾವಿನ ತೋಪು ಇದೆ, ಪಶ್ಚಿಮಕ್ಕೆ ಪ್ರೇಮಾಳ ಮನೆಯ ಹಿಂದಿನ ಖಾಲಿ ಜಾಗ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ರಸ್ತೆ ಇದೆ.

9. ಮಹಜರ್‌ಗೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಸ್ಥಳದಲ್ಲಿಯೇ ರುಜು

ಮಾಡಿದ್ದೇನೆ ಎಂದು ಉತ್ತರಿಸಿದ್ದಾರೆ. ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಆರ್.ಎಸ್. ವಕೀಲರಿಂದಃ 2 ರಿಂದ 4 ನೇ ಆರೋಪಿ ಪರವಾಗಿಃ ಮೇಲಿನ ಪಾಟೀಸವಾಲನ್ನು ಅಡಾಪ್ಟ್ ಮಾಡಲು ಕೋರಿದ್ದಾರೆ. ಅನುಮತಿ ನೀಡಿದೆ.**

**ಪಾಟೀಸವಾಲುಃ ಶ್ರೀ.ಎಸ್.ಎಂ. ವಕೀಲರಿಂದಃ 5 ರಿಂದ 7 ನೇ ಆರೋಪಿಗಳ ಪರವಾಗಿಃ ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.